

## ಅನ್ನ ನಂಜಾದೊಡೆ

‘ಅನ್ನ ನಂಜಾದೊಡೆ, ತುತ್ತು ಕುತ್ತಾದರೆ...’ ನಾವೇನು ಮಾಡಬೇಕು? ಹಣ್ಣು, ತರಕಾರಿ, ಬೇಳೆ ಕಾಳುಗಳು, ಎಣ್ಣೆ ಎಲ್ಲದರಲ್ಲೂ ಕಲಬೆರಕೆ ಆದರೆ ಏನನ್ನು ತಿನ್ನುವುದು? ಉಮಾ ಅನಂತ್ ಅವರ ಮುಖಪುಟ ಲೇಖನ (ಏ.22) ಓದಿದಾಗ ವಿಷಾದಭಾವ ಹುಟ್ಟಿತು. ಲಾಭದ ಕಡೆ ಮಾತ್ರ ಗಮನವಿಟ್ಟು, ಜನರ ಆರೋಗ್ಯದ ಕಡೆ ಸ್ವಲ್ಪವೂ ಕಾಳಜಿ ಕೊಡದವರ ಬಗ್ಗೆ ಬೇಸರ, ಆತಂಕ ಉಂಟಾಯಿತು. ವ್ಯಾಪಾರಿಗಳು ಜನರ ಆರೋಗ್ಯದ ದೃಷ್ಟಿಯಿಂದ ಕಲಬೆರಕೆ ಮಾಡುವುದನ್ನು ನಿಲ್ಲಿಸಬೇಕು. ಕೊಟ್ಟ ಹಣಕ್ಕೆ ಪರಿಶುದ್ಧವಾದ ಆಹಾರ ವಸ್ತುಗಳು ಸಿಗುವಂತಾಗಬೇಕು.

—ಕೆ.ಎಸ್. ಸವಿತ,ಬೆಂಗಳೂರು

ಲೇಖನ ಓದುತ್ತಿದ್ದಂತೆ, ಈ ರೀತಿಯ ಬರಹಗಳನ್ನು ಬರೀ ಓದುವುದೇ ಹೊರತಾಗಿ ಅದನ್ನು ತಡೆಯುವ ನಿಟ್ಟಿನಲ್ಲಿ ಏನೂ ಮಾಡಲಾಗುತ್ತಿಲ್ಲವಲ್ಲ ಎಂದೆನಿಸಿ ತುಂಬಾ ಬೇಜಾರಾಯಿತು.

—ಅನಸೂಯ ತ್ರಿವಿಕ್ರಮ್, ಕೇದಿಗೆಮನೆ

ನಾವು ತಿನ್ನುವ ಆಹಾರ ಕಲಬೆರಕೆ ಎಂದು ಗೊತ್ತೇ ಇತ್ತು. ಆದರೆ ಇಷ್ಟು ಅಗಾಧ ಪ್ರಮಾಣದಲ್ಲಿ ಎಂದು ತಿಳಿದು ಗಾಬರಿಯಾಯಿತು. ಕಲಬೆರಕೆ ಆಹಾರ, ಕಲುಷಿತ ನೀರು ಮತ್ತು ಗಾಳಿ ಸೇವಿಸಿ ಬೆಳೆಯುವ ಮುಂದಿನ ಪೀಳಿಗೆಯವರ ಆರೋಗ್ಯದ ಬಗ್ಗೆ ಯೋಚಿಸುವುದಕ್ಕೆ ಭಯವಾಗುತ್ತದೆ.

—ವಿಜಯಾ ಪ್ರಸಾದ್, ಬೆಂಗಳೂರು

ಲೇಖನವನ್ನು ಓದಿ ಆತಂಕವಾಯಿತು. ಮೆಣಸಿನ ಸಾರಿಗೆ ಎಷ್ಟು ಕಾಳುಮೆಣಸು ಹಾಕಿದರೂ ಮೊದಲಿನ ರುಚಿ, ಸ್ವಾದ ಏಕೆ ಬರುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರವೂ ಸಿಕ್ಕಿತು. ಸಂಬಂಧಪಟ್ಟ ಕಾನೂನುಗಳ ಕಟ್ಟುನಿಟ್ಟಾದ ಪಾಲನೆಯಿಂದ ಮಾತ್ರವೇ ಕಲಬೆರಕೆಯನ್ನು ತಡೆಯಲು ಸಾಧ್ಯವೇನೊ?

—ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ

## ರಜನಿಗೆ ಫಾಲ್ಕೆ

ರಜನಿಕಾಂತ್ ಜನಪ್ರಿಯ ನಾಯಕ ನಟ. ಅವರ ಶೈಲಿ ವಿಭಿನ್ನ, ವ್ಯಕ್ತಿತ್ವವೂ ಸರಳ, ಆಕರ್ಷಣೀಯ. ಚಿತ್ರರಂಗದ ಕರ್ಣ ರಜನಿಗೆ ಫಾಲ್ಕೆ ಪ್ರಶಸ್ತಿ ನೀಡಿರುವುದು ಕನ್ನಡಿಗರಿಗೆ ಸಂತಸ ತಂದಿದೆ. ಈ ಕುರಿತು ಏ. 15ರ ಸಂಚಿಕೆಯಲ್ಲಿ ವಿಶಾಖ ಎನ್. ಅವರು ಬರೆದಿರುವ ಲೇಖನ ಸೊಗಸಾಗಿದೆ.

—ಸುರೇಶ ಋಗ್ವೇದಿ

## ಮಹಿಳಾಪರ ಕಾನೂನು



ಕೋಡಿಬೆಟ್ಟು ರಾಜಲಕ್ಷ್ಮಿ ಅವರ ‘ಮಹಿಳಾ ಕಾನೂನು ಯಾರ ಪರ?’ (ಏ. 22) ಲೇಖನ ಚೆನ್ನಾಗಿದೆ. ಈಚೆಗೆ ವಾಯುವಿಹಾರಕ್ಕೆಂದು ಹೋದಾಗ, ಸ್ನೇಹಿತರೊಬ್ಬರು, ಸಚಿವರ ಲೈಂಗಿಕ ಹಗರಣದ ಬಗ್ಗೆ ಮಾತನಾಡಲು ಪ್ರಾರಂಭಿಸಿದಾಗ, ಮತ್ತೊಬ್ಬ ಸ್ನೇಹಿತರು, ದಯವಿಟ್ಟು ಬೆಳಗ್ಗೆ, ಬೆಳಗ್ಗೆ ಇಂಥ ತುಚ್ಛ ರಾಜಕಾರಣಿಗಳ ಮತ್ತು ರಾಜಕೀಯ ವ್ಯವಸ್ಥೆಗಳ ಬಗ್ಗೆ ಮಾತನಾಡದಿರಿ, ರಾಜಕೀಯ ವ್ಯವಸ್ಥೆ ಹಾಳಾಗಿ ಹೋಗಿದೆ. ಯಾರಿಗೂ ನೈತಿಕತೆ ಇಲ್ಲ ಎಂದು ಮಾತನ್ನು ನಿಲ್ಲಿಸಿದರು. ಸಾರ್ವಜನಿಕವಾಗಿ ಇಂತಹ ಅಭಿಪ್ರಾಯಗಳು ಮೂಡಿಬರುತ್ತಿದೆ.

—ಸುಬ್ರಹ್ಮಣ್ಯ ಕಲ್ಲೂರ, ಬೆಂಗಳೂರು

## ರಾಜ್ ನೆನಪಿನ ಸವಿಬುತ್ತಿ



ಡಾ. ವೀಣಾಭಾರತಿ ಅವರ ‘ರಾಜ್ ಸವಿನೆನಪುಗಳ ಅಕ್ಷಯ ಪಾತ್ರೆ’ ಲೇಖನ ತುಂಬಾ ಚೆನ್ನಾಗಿದೆ (ಏ. 22). ನಮ್ಮ ಕನ್ನಡ ಚಲನಚಿತ್ರ ರಂಗದ ಖ್ಯಾತ ನಟ ರಾಜ್ ಅವರ ನಟನೆ ಎಲ್ಲಾ ವರ್ಗದ ಜನರಿಗೆ ಹಿಡಿಸಿತ್ತು.

—ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ

ರಾಜ್ ಕುರಿತ ಲೇಖನ ಬಹಳ ಚೆನ್ನಾಗಿ ಮೂಡಿ ಬಂದಿದೆ. ಅಣ್ಣಾವ್ರನ್ನು ಆರಾಧಿಸುವವರಲ್ಲಿ ನಾನು ಒಬ್ಬ. ಅವರ ವ್ಯಕ್ತಿತ್ವವನ್ನು ಮರುಚಿಂತನೆಗೆ ಒಳಪಡಿಸಿದ ತಮಗೆ ಹೃದಯಪೂರ್ವಕ ಧನ್ಯವಾದಗಳು.

—ಎಸ್ .ಸಂತೋಷ್

ಸದಾ ಕಾಲಕ್ಕೂ ಅನ್ವಯಿಸುವ ಅಕ್ಷಯಪಾತ್ರೆ ರಾಜ್ ನೆನಪುಗಳು. ಚಿಕ್ಕದಾದರೂ ಬಹು ಚೊಕ್ಕದಿಂದ ನಿರೂಪಿಸಿದ, ಉತ್ತಮವಾದ ಸವಿನೆನಪೊಂದನ್ನು ನೀಡಿದ ವೀಣಾಭಾರತಿ ಅವರಿಗೆ ವಂದನೆಗಳು.

—ನಾ.ಸು. ನಾಗರಾಜ್, ಬೆಂಗಳೂರು

ರಾಜಕುಮಾರ್ ಆಗಾಗ ಬೆಂಗಳೂರಿನ ಹಳೆ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದರು. ಒಮ್ಮೆ ಶಿವಮೂರ್ತಿ ಎಂಬ ಆಪ್ತರು, ಅಣ್ಣಾವ್ರು ಪ್ಯಾಂಟ್ ಧರಿಸಿ ಬಂದಿದ್ದಾಗ, ಇನ್ನುಮೇಲೆ ಪ್ಯಾಂಟ್ ಬೇಡವೆಂದರು. ಹೀಗಾಗಿ, ಮುಂದಿನ ಸಾರಿಯಿಂದ ಪಂಚೆ ಧರಿಸಿ ಬಂದರು. ಯಾರೇ ಕೈ ಮುಗಿದರೂ, ಅಣ್ಣಾವ್ರೂ ತಿರುಗಿ ಕೈ ಮುಗಿಯುತ್ತಿದ್ದರು. ಅಷ್ಟು ಸರಳತೆ ಅವರದು.

—ಟಿ.ಆರ್.ಎಸ್. ಮೂರ್ತಿ, ಬೆಂಗಳೂರು

ನಮ್ಮೆಲ್ಲರ ಬದುಕಿನ ಕಾಲದಲ್ಲಿಯೇ ಇಂತಹ ಮಹಾ ಪುರುಷರನ್ನು ಕಂಡ ಪುಣ್ಯ ನಮ್ಮದು. ರಾಜಕುಮಾರ್ ಮರೆಯಲಾಗದ ಮಹಾಚೇತನ.

—ಶಾಂತಾರಾಮ ನಾಯ್ಕ

ತಾವು ಆಡಿಸಿದ ಮಗುವೇ ಮುಂದೆ ಅವರಿಗೆ ಡಾಕ್ಟರ್ ಆಗಿ ಚಿಕಿತ್ಸೆ ನೀಡಿದ್ದು ಹಾಗೂ ಅವರ ಕೈನಲ್ಲಿ ಕಿವಿಗೆ ಲೋಲಾಕು ತೊಡಿಸಿಕೊಂಡಿದ್ದು ವಿಶೇಷ. ಅದು ಡಾ. ವೀಣಾ ಅವರ ಪುಣ್ಯವೇ ಸರಿ. ಎಷ್ಟು ಜನಕ್ಕೆ ಈ ರೀತಿಯ ಸಂಪತ್ತು ಸಿಗುತ್ತದೆ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಉತ್ತಮ ಪ್ರಬಂಧ

ನಂದಿನಿ ಹೆದ್ದುರ್ಗ ಅವರ ‘ದಿಸ್ ಪೀಪಲ್ ವಿಲ್ ನೆವರ್ ಚೇಂಜ್’ (ಏ.22) ಪ್ರಬಂಧ ಬಹಳ ಚೆನ್ನಾಗಿ ಮೂಡಿ ಬಂದಿದೆ. ಲೇಖಕರು ತಮ್ಮ ಪ್ರವಾಸದ ಅನುಭವವನ್ನು, ವಿಶೇಷವಾಗಿ ಸ್ತ್ರೀಯರ ಬವಣೆಗಳನ್ನು ನಮ್ಮ ಕಣ್ಣ ಮುಂದೆ ಇಟ್ಟಿದ್ದಾರೆ. ಈ ಲೇಖನ ಓದಿ ಸರ್ಕಾರವು ಬಸ್ ನಿಲ್ದಾಣಗಳಲ್ಲಿ ಸ್ವಚ್ಛ ಶೌಚಾಲಯಗಳನ್ನು ವ್ಯವಸ್ಥೆ ಮಾಡುವತ್ತ ಗಮನ ಹರಿಸಿದರೆ ಒಳ್ಳೆಯದು.

—ರಮೇಶ್ ಎಸ್.

ಬಸ್ಸಿನಲ್ಲಿ ಪ್ರಯಾಣಿಸುವಾಗ ನೈಸರ್ಗಿಕ ಕರೆಯನ್ನು ಪೂರೈಸಿಕೊಳ್ಳಲು ಹೆಣ್ಣುಮಕ್ಕಳು ಪಡುವ ಪಡಿಪಾಟಲನ್ನು ಪ್ರಬಂಧ ಚೆನ್ನಾಗಿ ವಿವರಿಸುತ್ತದೆ.

—ಮುರಲೀಧರ ಕುಲಕರ್ಣಿ, ಬೀದರ್

## ‘ಸುಧಾ’ಲಿಂದ ತಂತ್ರಜ್ಞಾನ ಪಾಠ!

ಶಶಿಕುಮಾರ್ ಸಿ. ಅವರ ತಂತ್ರಜ್ಞಾನ ಕುರಿತ ಲೇಖನಗಳನ್ನು ಓದುವಾಗ ವಾರಪತ್ರಿಕೆ ಓದುತ್ತಿದ್ದೇನೆ ಅನ್ನಿಸುವ ಬದಲಿಗೆ, ವಾರಕ್ಕೊಮ್ಮೆ ‘ಸುಧಾ’ ಎಂಬ ಹೆಸರಿನ ಎಂಜಿನಿಯರ್ ಯುವತಿಯೊಬ್ಬಳಿಂದ ತಂತ್ರಜ್ಞಾನ ಕುರಿತು ತಿಳಿದುಕೊಳ್ಳುತ್ತಿದ್ದೇನೆ ಅನ್ನಿಸಿ ಉತ್ಸಾಹ ಮೂಡುತ್ತದೆ.

—ಬಸವರಾಜ., ತುಮಕೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in